DHalith
Emerging &
Established
Entrepreneurs'
Platform

DHEEEP

**Make a New Beginning**

(Registered as "THE GUIDE", vide RJN-4-00344-2013-2014, CD No:- RJND261, dt:30-01-2014)

Date : 14.03.23.

ರವರಿಗೆ:

ಮಾನ್ಯ ಪ್ರಧಾನ ಕಾರ್ಯದರ್ಶಿಗಳು
ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ
ಕರ್ನಾಟಕ ಸರ್ಕಾರ.

15 MAR 2023

ಮಾನ್ಯರೇ,

ವಿಷಯ: ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯ ಕೆಲವು ಅಕ್ರಮ ನಡೆಗಳ ಬಗ್ಗೆ.

* * * * *

ಸರ್ಕಾರವು ದಲಿತರ ಪುರೋಭಿವೃದ್ಧಿಗೆ ಹಮ್ಮಿಕೊಂಡಿರುವ ಹಲವಾರು ಯೋಜನೆಗಳಲ್ಲಿ ತನ್ನ ಅಧೀನದ ಕ ಕೈ ಪ್ರ ಮಂಡಳಿಯ ವತಿಯಿಂದ ಕೈಗಾರಿಕಾ ನಿವೇಶನಗಳನ್ನು ಹಂಚುತ್ತಿರುವುದು ಒಂದಾಗಿರುತ್ತದೆ.

ನಿವೇಶನಗಳನ್ನು ಹಂಚುವ ಈ ಪ್ರಕ್ರಿಯೆಯಲ್ಲಿ ಹಲವು ನ್ಯೂನ್ಯತೆಗಳಿದ್ದು ಅದನ್ನು ತಮ್ಮ ಗಮನಕ್ಕೆ ತರಲು ಇಚ್ಛಿಸುತ್ತೇವೆ. ಕೈಗಾರಿಕಾ ಪ್ರದೇಶ ಒಂದು ನಿರ್ಮಾಣಗೊಂಡ ನಂತರ ನಿಯಮಾನುಸಾರ ದಲಿತರ ಪಾಲನ್ನು ಹಂಚುತ್ತಿರುವುದು ಹೌದಾದರೂ, ಹಂಚುತ್ತಿರುವ ಸದರಿ ನಿವೇಶನಗಳು <u>ಆಯಕಟ್ಟಿನ/ಪ್ರಮುಖ ಪ್ರದೇಶದಿಂದ ದೂರವಿರುವುದು</u> ಕೇವಲ ಕಾಕತಾಳೀಯವಿರಲಾರದು. ಅಲ್ಲದೆ ಮುಖ್ಯರಸ್ತೆ/ಅಡ್ಡರಸ್ತೆಗಳಲ್ಲಿನ <u>ಮೂಲೆ ನಿವೇಶನಗಳು</u> ದಲಿತರಿಗೆ ಮೀಸಲಿಡುವ ಪದ್ಧತಿಯೇ ವಿರಳವಾಗಿದೆ ಮತ್ತೂ ಮುಂದುವರೆದು ವ್ಯಾಜ್ಯವುಳ್ಳ/ವಿವಾದಿತ ಭೂಮಿಯಲ್ಲಿನ ನಿವೇಶನಗಳನ್ನು ಹಂಚುತ್ತಿರುವ ಪ್ರಕ್ರಿಯೆಯು ನಡೆದು ಬಂದಿದೆ. ಇದಕ್ಕೆ ಉದಾಹರಣೆಯಾಗಿ ಹಾರೋಹಳ್ಳಿ ಹಾಗೂ ಡಾಬಸ್‌ಪೇಟೆ ಕೈಗಾರಿಕಾ ಪ್ರದೇಶಗಳಲ್ಲಿನ ವ್ಯಾಜ್ಯಗಳನ್ನು ಉದಾಹರಿಸಬಹುದಾಗಿದೆ.

ಅಲ್ಲದೆ ಕೈಗಾರಿಕಾ ವಸಾಹತು ಒಂದು ಸಂಪೂರ್ಣ ನಿರ್ಮಾಣಗೊಳ್ಳುವ ಮುನ್ನವೇ ನಿವೇಶನಗಳ ಹಂಚಿಕೆ ಪ್ರಕ್ರಿಯೆ ಪೂರ್ಣಗೊಳಿಸುವ ಪರಿಪಾಠವಿದ್ದು ನಿವೇಶನಗಳ ಹಂಚಿಕೆಗೆ ಸಿದ್ಧಗೊಂಡಿರುವ ಕೋಲಾರ ಜಿಲ್ಲೆಯಲ್ಲಿನ ಬಾವನಹಳ್ಳಿ, ವೇಮಗಲ್ಲು ಹಾಗೂ ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿನ ಗೌರಿಬಿದನೂರು ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದಾಬಸ್‌ಪೇಟೆ 6ನೇಹಂತ ಇವುಗಳಲ್ಲದೆ ರಾಜ್ಯದ ಇನ್ನಿತರೆ ಜಿಲ್ಲೆಗಳಲ್ಲಿನ ಕೈಗಾರಿಕಾ ಪ್ರದೇಶಗಳಲ್ಲಿ ಮೇಲ್ಕಾಣಿಸಿದ ಅನ್ಯಾಯ ನಡೆಯುವುದು ಶತಸಿದ್ಧ.

-2-

# 670, 10th Main, RPC Layout, Vijayanagar 2nd Stage, Bangalore - 560040
E-mail : satish07jd@gmail.com Mobile : +91-9740063477

Scanned with C